ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ
# ಸೂರ್ಯ ಪ್ರಗತಿ
SURYA PRAGATHI Kannada daily
SP NEWS ಡಿಜಿಟಲ್ ನ್ಯೂಸ್ ಕಹಾನಿ
ಪ್ರತಿ ಸುದ್ದಿಯ ಧ್ವನಿ
suryapragathidailynews@gmail.com 9901010109 L2/RNP-1285/TMR/2025-27
Volume:05 ಸಂಪುಟ: 05 | Issue:178 ಸಂಚಿಕೆ: 178 | Date:06-08-2026 Thursday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

# 'ಭಿನ್ನಮತದ ಬಿರುಗಾಳಿಗೆ ಸಿಲುಕಿ ತತ್ತರಿಸುತ್ತಿರುವ ಕಾಂಗ್ರೆಸ್ ಸರ್ಕಾರ'

## ಮಹಿಳೆಗೆ ಸ್ಥಾನ ನೀಡದ ಕಾಂಗ್ರೆಸ್ ಪಕ್ಷಕ್ಕೆ ಧಿಕ್ಕಾರ: ಶಾಸಕ ಸುರೇಶ್‌ಗೌಡ

ಸೂರ್ಯಪ್ರಗತಿನ್ಯೂಸ್.ಕಾಂ





ತುಮಕೂರು: ಕರ್ನಾಟಕದ ಸಚಿವ ಸಂಪುಟದ ನೂತನ ಸದಸ್ಯರ ಪಟ್ಟಿಯನ್ನು ಕೇಂದ್ರದ ಹೈಕಮಾಂಡ್ ಸಿದ್ಧಪಡಿಸಿ ಕಳುಹಿಸಿ ಕೊಟ್ಟಿದ್ದನ್ನು ನೋಡಿದರೆ ಸಂಪುಟ ರಚನೆಯು ಮುಖ್ಯಮಂತ್ರಿಯ ಪರಮಾಧಿಕಾರ ಎಂಬ ಸಂವಿಧಾನದ ಆಶಯವನ್ನು ಗಾಳಿಗೆ ತೂರಿದಂತೆ ಆಗಿದೆ ಎಂದು ತುಮಕೂರು ಗ್ರಾಮಾಂತರ ಬಿಜೆಪಿ ಶಾಸಕ ಬಿ. ಸುರೇಶ್‌ಗೌಡರು ಬುಧವಾರ ಟೀಕಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಹೊಸ ಸಚಿವರ ಪ್ರಮಾಣ ವಚನದ ಹಿಂದೆಯೇ ಪಕ್ಷದಲ್ಲಿ ಬಂಡಾಯದ ಮತ್ತು ಭಿನ್ನಮತದ ಬಿರುಗಾಳಿ ಎದ್ದಿರುವುದನ್ನು ನೋಡಿದರೆ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರ್ಕಾರ ಕೇವಲ ಎರಡು ತಿಂಗಳಲ್ಲಿಯೇ ಭಾರಿ ಬಿರುಗಾಳಿಗೆ ಸಿಲುಕಿದ ಹಡಗಿನಂತೆ ಆಗಿದೆ ಎಂದು ತಿಳಿಸಿದ್ದಾರೆ.

ಉಳಿದವರು ಬಿಡಿ, ಸ್ವತಃ ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯರೇ ಆದ ಸಿದ್ದರಾಮಯ್ಯನವರೇ ಸಂಪುಟ ಪ್ರಮಾಣ ವಚನಕ್ಕೆ ಬಹಿಷ್ಕಾರ ಹಾಕಿದ್ದು, ಅತ್ಯಂತ ಹಿರಿಯ ಸದಸ್ಯರಾದ ಟಿ.ಬಿ. ಜಯಚಂದ್ರ ಅಂಥವರು ತಮಗೆ ಕಾಂಗ್ರೆಸ್ಸಿಗ ಎಂದು ಹೇಳಿಕೊಳ್ಳಲು ನಾಚಿಕೆಯಾಗುತ್ತಿದೆ ಎಂದು ಬಹಿರಂಗವಾಗಿಯೇ ಟೀಕಿಸಿರುವುದು ಹೊಸ ಸಂಪುಟಕ್ಕೆ ಮಾಡಿದ ಮಂಗಳಾರತಿಯಾಗಿದೆ. ಇದಕ್ಕಿಂತ ಹೆಚ್ಚಿನ ಮುಖ ಭಂಗ ಕಾಂಗ್ರೆಸ್ ಹೈಕಮಾಂಡ್‌ಗೆ ಬೇಕಿಲ್ಲ ಎಂದು ಸುರೇಶ್‌ಗೌಡ ವ್ಯಂಗ್ಯವಾಡಿದ್ದಾರೆ.

33 ಜನ ಸಚಿವರನ್ನು ನೇಮಿಸಿದಾಗಲೂ ಒಬ್ಬ ಮಹಿಳೆಗೆ ಸ್ಥಾನ ಕೊಡುವಂಥ ಕನಿಷ್ಠ ವಿವೇಕವಿಲ್ಲದ ಮತ್ತು ಮೊಟ್ಟ ಮೊದಲ ಸಲ ಬ್ರಾಹ್ಮಣರನ್ನು ಉದ್ದೇಶ ಪೂರ್ವಕವಾಗಿ ಸಂಪುಟದಿಂದ ಹೊರಗೆ ಇಟ್ಟ ಕಾಂಗ್ರೆಸ್ ಪಕ್ಷಕ್ಕೆ ಧಿಕ್ಕಾರವಿರಲಿ.ಈ ಸರ್ಕಾರಕ್ಕೆ ಬುದ್ದಿ ಕಲಿಸಲು ಜನರು ಹಾದಿ ಬೀದಿಯಲ್ಲಿ ಕಾಯುತ್ತಿದ್ದಾರೆ ಎಂದು ಅವರು ಎಚ್ಚರಿಸಿದ್ದಾರೆ. ಹೊಸ ಸಂಪುಟದಲ್ಲಿ ಪಕ್ಷ ವಿರೋಧಿಗಳು, ಜೈಲಿನಿಂದ ಹೊರಗೆ ಬಂದು ಯಾವುದೇ ಕ್ಷಣದಲ್ಲಿ ಜೈಲಿಗೆ ಹೋಗಬಹುದಾದ ಕಳಂಕಿತರು ಮತ್ತು ಭ್ರಷ್ಟರು ಸೇರಿರುವುದನ್ನು ನೋಡಿದರೆ ಇವರೆಲ್ಲ ಪೇಮೆಂಟ್ ಗಿರಾಕಿಗಳು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಥೈಲಿ ಕೊಟ್ಟವರಿಗೆ ಸಂಪುಟದಲ್ಲಿ ಸ್ಥಾನ ಸಿಕ್ಕಿದೆ. ಪ್ರಾಮಾಣಿಕರಿಗೆ ಇಲ್ಲಿ ಸ್ಥಾನವಿಲ್ಲ ಎಂಬ ಗುಬ್ಬಿ ಶಾಸಕ ಶ್ರೀನಿವಾಸ್‌ಅವರ ಮಾತು ನೂರಕ್ಕೆ ನೂರು ನಿಜ ಎಂದು ಗೌಡರು ಕುಟುಕಿದ್ದಾರೆ. ತಮ್ಮ ಜತೆಗೆ ಪ್ರಮಾಣ ವಚನ ತೆಗೆದುಕೊಂಡ 13 ಜನ ಸಚಿವರ ಆಯ್ಕೆಯಲ್ಲಿಯೂ ಶಿವಕುಮಾರ್ ಅವರಿಗೆ ಯಾವುದೇ ಅಧಿಕಾರ ಇರಲಿಲ್ಲ. ಈಗಲೂ ಅದೇ ಸ್ಥಿತಿ ಮುಂದುವರಿದಿದೆ. ತಮ್ಮ ನೇತೃತ್ವದಲ್ಲಿ ರಾಜ್ಯಕ್ಕೆ ಒಂದು ಸಮರ್ಥ ಸರ್ಕಾರ ಕೊಡಬೇಕು ಎಂಬ ಆಶಯ ಇಟ್ಟುಕೊಂಡಿದ್ದ ಮುಖ್ಯಮಂತ್ರಿಗಳಿಗೆ ಅವರ ಪಕ್ಷದವರೇ ವತೊಡಕುಗಾಲು ಹೊಡೆಯುತ್ತಿರುವುದು ಸ್ಪಷ್ಟವಾಗಿದೆ. ಈಗ ಉದ್ಭವಿಸಿರುವ ಭಿನ್ನಮತವನ್ನು ತಣಿಸಿ ಸರ್ಕಾರವನ್ನು ಮುನ್ನಡೆಸಲು ಶಿವಕುಮಾರ್ ಅವರಿಗೆ ಸಾಧ್ಯವಾದರೆ ಅದುಜಗತ್ತಿನ ಎಂಟನೇ ಆಶ್ಚರ್ಯ ಎನಿಸಲಿದೆ ಎಂದು ಶಾಸಕ ಸುರೇಶ್ ಗೌಡರು ಭವಿಷ್ಯ ನುಡಿದಿದ್ದಾರೆ. ಕರ್ನಾಟಕದಲ್ಲಿ ಅತ್ಯಂತ ಹಿರಿಯ ಸಂಸದೀಯ ಪಟು ಎನಿಸಿರುವ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಲು ಸೂಚಿಸಿರುವುದು ಸಂವಿಧಾನದ ಪ್ರತಿ ಹಿಡಿದು ಕೊಂಡು ತಿರುಗುವ ಕಾಂಗ್ರೆಸ್ ಪಕ್ಷ ಹೇಗೆ ಸಾಂವಿಧಾನಿಕ ಹುದ್ದೆಗಳಿಗೆ ಅಪಮಾನ ಮಾಡುತ್ತದೆ ಎನ್ನುವುದಕ್ಕೆ ಒಂದು ನಿದರ್ಶನ. ಹೊರಟ್ಟಿಯವರು ರಾಜೀನಾಮೆ ಕೊಡಬಾರದು. ಅವರನ್ನು ಆ ಹುದ್ದೆಯಿಂದ ಕಾಂಗ್ರೆಸ್ ಪಕ್ಷ ಹೇಗೆ ಇಳಿಸುತ್ತದೆ ಎಂಬುದನ್ನು ನಾವೂ ನೋಡಿಯೇ ಬಿಡುತ್ತೇವೆ ಎಂದು ಸುರೇಶ್‌ಗೌಡರು ಸವಾಲು ಹಾಕಿದ್ದಾರೆ.

# ಬರ ಪರಿಸ್ಥಿತಿ ಜನ್ಮದಿನಾಚರಣೆ ಇಲ್ಲ ಉಪ ಮುಖ್ಯಮಂತ್ರಿ ಪರಮೇಶ್ವರ್

ಸೂರ್ಯಪ್ರಗತಿನ್ಯೂಸ್.ಕಾಂ




ರಾಜ್ಯದಲ್ಲಿಬರ ಪರಿಸ್ಥಿತಿ ತಲೆದೋರಿರುವ ಹಿನ್ನೆಲೆ ಈ ವರ್ಷ ನನ್ನ ಜನ್ಮದಿನವನ್ನು ಆಚರಿಸದಿರಲು ನಿರ್ಧರಿಸಿದ್ದೇನೆ. ಪಕ್ಷದ ಕಾರ್ಯಕರ್ತರು, ಬೆಂಬಲಿಗರು, ಹಿತೈಷಿಗಳು ಹಾಗೂ ಸಾರ್ವಜನಿಕರು ಯಾವುದೇ ರೀತಿಯ ಸಂಭ್ರಮಾಚರಣೆ, ಸನ್ಮಾನ ಕಾರ್ಯಕ್ರಮ ಅಥವಾ ಸಭೆಗಳನ್ನು ಆಯೋಜಿಸಬಾರದು ಎಂದು ವಿನಮ್ರವಾಗಿ ಮನವಿ ಮಾಡುತ್ತೇನೆ. ನಾನು ಕಾರ್ಯ ನಿಮಿತ್ತ ದೂರದ ಪ್ರಯಾಣ ಮಾಡಬೇಕಾಗಿರುವುದರಿಂದ ಈ ದಿನ ವೈಯಕ್ತಿಕ ಭೇಟಿಗೆ ಲಭ್ಯವಿರುವುದಿಲ್ಲ. ನಿಮ್ಮ ಪ್ರೀತಿ, ಅಭಿಮಾನ ಮತ್ತು ಶುಭಾಶಯಗಳನ್ನು ನಾನು ಹೃದಂಯಪೂರ್ವಕವಾಗಿ ಗೌರವಿಸುತ್ತೇನೆ. ನನ್ನ ಜನ್ಮದಿನವನ್ನು ಅರ್ಥ ಪೂರ್ಣ ಜನಸೇವೆಯ ಮೂಲಕ ಹಾಗೂ ಬರದಿಂದ ಸಂಕಷ್ಟಕ್ಕೊಳಗಾದ ಜನರಿಗೆ ನೆರವು ನೀಡುವ ಮೂಲಕ ಆಚರಿಸುವಂತೆ ಕೋರುತ್ತೇನೆ ಎಂದು ವಿದೇಶ ಪ್ರವಾಸದಲ್ಲಿರು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರ ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದಾರೆ.

# ತಾರಕಕ್ಕೇರಿದ ಮಂತ್ರಿಸ್ಥಾನ ವಂಚಿತ ಆಕಾಂಕ್ಷಿ ಶಾಸಕರ ಅಸಮಾಧಾನ ಮನವೊಲಿಕೆಗೆ ವರಿಷ್ಠರ ಕಸರತ್ತು

ಸೂರ್ಯಪ್ರಗತಿನ್ಯೂಸ್.ಕಾಂ







ಸಚಿವ ಸಂಪುಟ ವಿಸ್ತರಣೆ ಬಳಿಕ ಮಂತ್ರಿಸ್ಥಾನ ವಂಚಿತ ಆಕಾಂಕ್ಷಿ ಶಾಸಕರ ಅಸಮಾಧಾನ ಕಾಂಗ್ರೆಸ್ ನಲ್ಲಿ ತಾರಕಕ್ಕೇರಿದೆ. ಪಕ್ಷದ ವರಿಷ್ಠರ ಮನವೊಲಿಕೆ ಯತ್ನದ ಹೊರತಾಗಿಯೂ ಹಲವು ಶಾಸಕರು ಆಕ್ರೋಶ ಮುಂದುವರಿಸಿರೋದು ಪಕ್ಷಕ್ಕೀಗ ತಲೆನೋವಾಗಿ ಮಾರ್ಪಟ್ಟಿದೆ. ರಾಜ್ಯ ರಾಜಕಾರಣದಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ನಡೆಯುತ್ತಿರುವ ಹಿನ್ನೆಲೆ ಬೆಂಗಳೂರಿನತ್ತ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೊರಟಿದ್ದು, ಅಸಮಾಧಾನಿತ ಶಾಕರನ್ನು ಭೇಟಿಯಾಗಿ ಅವರು ಮಾತುಕತೆ ನಡೆಸಲಿದ್ದಾರೆ ಎನ್ನಲಾಗಿದೆ.

ವಿಪಕ್ಷದ ಸಾಲಿನಲ್ಲಿ ಪ್ರತ್ಯೇಕ ಆಸನದ ಬೇಡಿಕೆಗೆ ಜಯಚಂದ್ರ ತೀವ್ರ ಅಸಮಾಧಾನ ಸಚಿವ ಸಂಪುಟ ವಿಸ್ತರಣೆಯಲ್ಲಿ ಅವಕಾಶ ವಂಚಿತರಾದ ಹಿನ್ನೆಲೆ ವಿಧಾನಸಭೆಯಲ್ಲಿ ವಿಪಕ್ಷ ಸಾಲಿನಲ್ಲಿ ಆಸನ ವ್ಯವಸ್ಥೆ ಕಲ್ಪಿಸುವಂತೆ ವಿಧಾನಸಭಾಧ್ಯಕ್ಷರಿಗೆ ಶಿರಾ ಕ್ಷೇತ್ರದ ಶಾಸಕ ಟಿ.ಬಿ.ಜಯಚಂದ್ರ ಪತ್ರ ಬರೆಯಲು ಮುಂದಾಗಿದ್ದಾರೆ. ಆಡಳಿತ ಪಕ್ಷದ ಸದಸ್ಯರ ಸಾಲಿನಲ್ಲಿ ಕುಳಿತುಕೊಳ್ಳಲು ಇಚ್ಚೆಯಿಲ್ಲ. ಹೀಗಾಗಿ ವಿರೋಧ ಪಕ್ಷದ ಸಾಲಿನಲ್ಲಿ ಪ್ರತ್ಯೇಕ ಆಸನದ ವ್ಯವಸ್ಥೆ ಕಲ್ಪಿಸಬೇಕು ಎಂಬ ಬಗ್ಗೆ ಆಗ್ರಹವಿರುವ ಪತ್ರವನ್ನು ಜಯಚಂದ್ರ ಸಿದ್ಧಪಡಿಸಿಕೊಂಡಿದ್ದಾರೆ. ಅಲ್ಲಿಂದಲೇ ಸರ್ಕಾರದ ಕಾರ್ಯ ವೈಖರಿ ಗಮನಿಸಿ ಸಲಹೆ, ಮಾರ್ಗದರ್ಶನ ನೀಡುವ ಬಗ್ಗೆಯೂ ಅವರು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ಪ್ರಸ್ತುತ ನೂತನ ವಿಧಾನಸಭಾಧ್ಯಕ್ಷರ ಆಯ್ಕೆ ನಡೆಯಬೇಕಿರುವ ಹಿನ್ನೆಲೆ, ರಾಜ್ಯಪಾಲರು ಸಿಎಂ ಶಿಫಾರಸಿನ ಮೇರೆಗೆ ಹಂಗಾಮಿ ಸ್ಪೀಕರ್ ಆಗಿ ಟಿ.ಬಿ.ಜಯಚಂದ್ರ ನೇಮಿಸಿ ಅಧಿಸೂಚನೆ ಹೊರಡಿಸಲಾಗಿದೆ. ಆದರೆ ಈ ಜವಾಬ್ದಾರಿಯನ್ನೂ ಅವರು ನಿರಾಕರಿಸಿರುವ ಮಾಹಿತಿ ಇದೆ.

ಮತ್ತೊಂದೆಡೆ, ನಾನು ಕುಮಾರಸ್ವಾಮಿರನ್ನು ಈಗ ನೆನೆಪು ಮಾಡಿಕೊಳ್ಳಬೇಕು. ನನಗೆ ಸಚಿವ ಸ್ಥಾನ ಸಿಗಲ್ಲ ಎಂದು ಮನೆಯಲ್ಲಿಯೇ ಕುಳಿತಿದ್ದೆ. ಆಗ ಹೆಚ್‌ಡಿಕೆ ಅವರೇ ಕರೆ ಮಾಡಿ ಸಚಿವರನ್ನಾಗಿ ಮಾಡಿದ್ರು. ಅದನ್ನು ನಾನು ಯಾವತ್ತೂ ಮರೆಯಲ್ಲ ಎಂದು ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಹೇಳಿದ್ದಾರೆ. ಯಾವುದೋ ಒಂದು ವಿಚಾರಕ್ಕೆ ಮಾತ್ರ ಭಿನ್ನಾಭಿಪ್ರಾಯ ಆಗಿತ್ತು. ಉಳಿದಂತೆ ನಮ್ಮಿಬ್ಬರ ನಡುವೆ ಏನೂ ಇಲ್ಲ ಎಂದವರು ಹೇಳಿರೋದು ಅಚ್ಚರಿಗೆ ಕಾರಣವಾಗಿದೆ.

# ಕಸ ಸಂಗ್ರಹಕಾರರಿಗೆ ಗೌರವಾರ್ಪಣೆ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಪ್ರತಿದಿನ ಮನೆ ಬಾಗಿಲಿಗೆ ಬಂದು ಮನೆಯ ಕಸ ಸಂಗ್ರಹಿಸುವ ನಗರ ಪಾಲಿಕೆಯ ಕಸ ಸಂಗ್ರಹಣಾ ಸಿಬ್ಬಂದಿಯನ್ನು ಶಿರಾ ಗೇಟ್‌ನ 3ನೇ ವಾರ್ಡ್ ಚಂದನಾ ಪಾಕ್ ಬಡಾವಣೆ ನಾಗರೀಕರು ಸನ್ಮಾನಿಸಿ ಅವರ ಸೇವೆಯನ್ನು ಗೌರವಿಸಿದರು.

ವಾರ್ಡಿನ ನಗರ ಪಾಲಿಕೆ ಮಾಜಿ ಸದಸ್ಯ ಲಕ್ಷ್ಮೀ ನರಸಿಂಹರಾಜು ಹಾಗೂ ಸ್ಥಳೀಯ ನಾಗರೀಕರ ಮುಖಂಡರು ಕಸ ಸಂಗ್ರಣೆ ಸಿಬ್ಬಂದಿಯಾದ ಮಹದೇವ್, ಮೂರ್ತಿ ಅರವನ್ನು ಸನ್ಮಾನಿಸಿ ಗೌರವಿಸಿದರು. ಈ ವೇಳೆ ಮಾತನಾಡಿದ ಪಾಲಿಕೆ ಮಾಜಿ ಸದಸ್ಯ ಲಕ್ಷ್ಮೀನರಸಿಂಹರಾಜು, ನಗರದ ಸ್ವಚ್ಛತಾ ಕಾರ್ಯ ನಿರ್ವಹಿಸುವ ಪಾಲಿಕೆಯ ಪೌರ ಕಾರ್ಮಿಕರನ್ನು ನಾಗರೀಕರು ಗೌರವದಿಂದ ಕಾಣಬೇಕು. ಕಸ ಸಂಗ್ರಹಣೆಗಾಗಿ ಮನೆ ಬಾಗಿಲಿಗೆ ಬರುವವರಿಗೆ ಹಸಿ ಕಸ, ಒಣ ಕಸವನ್ನು ಪ್ರತ್ಯೇಕಗೊಳಿಸಿ ಸಿಬ್ಬಂದಿಗೆ ನೀಡಿ ಸಹಕರಿಸಬೇಕು. ಪರಿಸರ ಸ್ವಚ್ಛತೆ ಪ್ರತಿಯೊಬ್ಬರ ಜವಾಬ್ದಾರಿ ಎಂದು ಹೇಳಿದರು.

ನಿವೃತ್ತ ಗ್ರಂಥಾಲಯ ಅಧಿಕಾರಿ ಡಿ.ವಿ.ಶೇಷಾಚಲ, ನಿವೃತ್ತ ತಹಶೀಲ್ದಾರ್ ಶಂಭು ಲಿಂಗಯ್ಯ, ಚಾರ್ವಿ ಸ್ಟುಡಿಯೊದ ಮಲ್ಲೇಶ್, ಮುಖಂಡರಾದ ಮೋಹನ್, ಪಿಡಿಓ ರವಿ, ವಿಮಲಾ ಕರಿಬಸಪ್ಪ, ಯಶೋಧ, ಅನುಸೂಯ, ಕನುಮಪ್ಪ, ಕವಿತಾ, ಪ್ರೇಮಾ ಮೊದಲಾದವರು ಹಾಜರಿದ್ದರು.

# 14500 ಮಕ್ಕಳಿಗೂ ಉಚಿತವಾಗಿ ಆರೋಗ್ಯ ತಪಾಸಣೆ; ಶಾಸಕ ಕೆ.ಎನ್. ರಾಜಣ್ಣ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ.: ತಾಲೂಕಿನಲ್ಲಿ ವ್ಯಾಸಂಗ ಮಾಡುತ್ತಿರುವ 14500 ಮಕ್ಕಳಿಗೂ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಲಾಗುವುದು ಎಂದು ಮಾಜಿ ಸಚಿವ, ಶಾಸಕ ಕೆ.ಎನ್. ರಾಜಣ್ಣ ತಿಳಿಸಿದರು.

ತಾಲೂಕಿನ ದೊಡ್ಡೇರಿ ಹೋಬಳಿಯ ರಂಗಾಪುರ ಗ್ರಾಮದಲ್ಲಿ ಬುಧವಾರ ಬಡವನಹಳ್ಳಿ– ರಂಗಾಪುರ ರಸ್ತೆ ಮಧ್ಯೆ 7 ಕೋಟಿ ವೆಚ್ಚದಲ್ಲಿ ಎರಡು ಸೇತುವೆ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು ಶಾಲಾ ಮಕ್ಕಳಿಗೆ ಪ್ರಾರಂಭದಲ್ಲಿ ಆರೋಗ್ಯ ತಪಾಸಣೆ ಮಾಡಿದರೆ ಆರೋಗ್ಯ ವಂತ ಮಕ್ಕಳನ್ನು ಸಮಾಜದಲ್ಲಿ ನೋಡಬಹುದು. ಮುಂದಿನ ಒಂದೂವರೆ ತಿಂಗಳ ಒಳಗೆ ಎಲ್ಲ ಮಕ್ಕಳಿಗೂ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ರಂಗಾಪುರ ಗ್ರಾಮದಲ್ಲಿ 7 ಕೋಟಿ ವೆಚ್ಚದಲ್ಲಿ ಎರಡು ಸೇತುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಮಳೆಗಾಲದಲ್ಲಿ ಸಾರ್ವಜನಿಕರು ಎದುರಿಸುತ್ತಿದ್ದ ಸಂಚಾರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ, ರಂಗಾಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರ ಬಹುಕಾಲದ ಬೇಡಿಕೆಯಾಗಿದ್ದ ಸೇತುವೆ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಈ ಸೇತುವೆ ನಿರ್ಮಾಣದಿಂದ ಗ್ರಾಮಸ್ಥರಿಗೆ ವರ್ಷಪೂರ್ತಿ ಸುರಕ್ಷಿತ ಹಾಗೂ ಸುಗಮ ಸಂಚಾರದ ವ್ಯವಸ್ಥೆ ಕಲ್ಪಿಸುವುದರಿಂದ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತಮ್ಮ ದೈನಂದಿನ ಸಂಚಾರವನ್ನು ಯಾವುದೇ ಅಡಚಣೆಯಿಲ್ಲದೆ ಸುಲಭವಾಗಿ ನಡೆಸಿಕೊಳ್ಳಲು ಹೆಚ್ಚಿನ ಅನುಕೂಲವಾಗಲಿದೆ. ಮೂರು ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳಿಸಬೇಕು. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು ಎಂದರು.

ತಾಲೂಕಿನ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿಕೊಡುವ ಉದ್ದೇಶದಿಂದ ರಂಗಾಪುರ ಗ್ರಾಮದ ಸಮೀಪ 74.5 ಕೋಟಿ ವೆಚ್ಚದಲ್ಲಿ ಜಿಟಿಟಿಸಿ ಕಾಲೇಜು ನಿರ್ಮಾಣ ಮಾಡಲಾಗುತ್ತಿದೆ. 10 ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ಇಲ್ಲಿ ಶಿಕ್ಷಣ ಪಡೆದರೆ ತಕ್ಷಣವೇ ಉದ್ಯೋಗ ದೊರೆಯಲಿದೆ. ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದು, ಶಿಸ್ತು ಬದ್ದ ಜೀವನ ನಡೆಸಲು ಪೂರಕ ವಾತಾವರಣ ನಿರ್ಮಿಸಲಾಗುವುದು. ಬರಗಾಲದ ಬಗ್ಗೆ ಚಿಂತೆ ಬೇಡ ತಡವಾದರೂ ಮಳೆ ಬರಲಿದೆ. ಮೇವು, ನೀರು ವಿಚಾರದಲ್ಲಿ ಎಚ್ಚರಿಕೆ ವಹಿಸಲಾಗಿದೆ. ಮೇವಿನ ಕೊರತೆ ಬರದಂತೆ ಕ್ರಮ ವಹಿಸಲಾಗಿದ್ದು, ಬರ ಪರಿಸ್ಥಿತಿ ಕಂಡು ಬಂದಲ್ಲಿ, ಗೋಶಾಲೆ ತೆರೆದು ಗೋಪಾಲಕರಿಗೆ ಮಧ್ಯಾಹ್ನದ ವೇಳೆ ಊಟದ ವ್ಯವಸ್ಥೆ ಮಾಡಲಾಗುವುದು. ರೈತರು ಯೋಚನೆ ಮಾಡುವ ಅಗತ್ಯ ಇಲ್ಲ. ನಮ್ಮ ಸರ್ಕಾರ ರೈತರ ಪರವಾಗಿದೆ ಎಂದರು.

ಪೋಷಕರು ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕಾರ ನೀಡಿ . ಮಕ್ಕಳು ಶಾಲೆಗೆ ಹಾಜರಾಗದಂತೆ ಕ್ರಮ ವಹಿಸಿ, ನಿರಂತರವಾಗಿ ಶಾಲೆಗೆ ಹಾಜರಾಗುವುದರಿಂದ ಕಲಿಕೆಯ ಗುಣಮಟ್ಟ ಹೆಚ್ಚಲಿದೆ. ತಾಲೂಕಿನಲ್ಲಿ 5 ಸಾವಿರ ಅಂಗನವಾಡಿ ಮಕ್ಕಳಿಗೆ ಉಚಿತ ಸಮವಸ್ತ್ರನೀಡಲಾಗುತ್ತಿದೆ ಇದು ರಾಜ್ಯದಲ್ಲೇ ಮಾದರಿ ಯೋಜನೆಯಾಗಿದೆ. ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲ ಮಕ್ಕಳಿಗೂ ಅವರ ಅಗತ್ಯಕ್ಕೆ ಅನುಗುಣವಾಗಿ ಉಚಿತ ನೋಟ್ ಪುಸ್ತಕ ನೀಡಲಾಗುತ್ತಿದೆ ಎಂದ ಅವರುಕಳೆದ ವರ್ಷ ಬಹಳಷ್ಟು ಮಕ್ಕಳು ವಿದ್ಯಾರ್ಥಿ ವೇತನದಿಂದ ವಂಚಿತರಾಗಿದ್ದು, ಈ ವರ್ಷ ಮಕ್ಕಳ ವಿದ್ಯಾರ್ಥಿ ವೇತನಕ್ಕೆ ತೊಂದರೆಯಾಗದಂತೆ ಕ್ರಮ ವಹಿಸಿ ಯಾವುದೇ ಮಕ್ಕಳು ವಿದ್ಯಾರ್ಥಿ ವೇತನದಿಂದ ವಂಚಿತರಾಗಬಾರದು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಸ್‌ಐಆರ್ ಗೆ ಇನ್ನು ಎರಡು ದಿನ ಮಾತ್ರ ಇದ್ದು, ಮತದಾರರು ಅಗತ್ಯ ದಾಖಲೆ ನೀಡಿ ಮತದಾರರ ಪಟ್ಟಿಗೆ ತಮ್ಮ ಹೆಸರು ಸೇರಿಸಿ,ಎಸ್‌ಐಆರ್‌ನಲ್ಲಿ ತಮ್ಮ ಹೆಸರು ಸೇರಿಸದಿದ್ದರೆ ಸರ್ಕಾರದ ಸವಲತ್ತುಗಳಿಂದ ವಂಚಿತರಾಗುತ್ತೀರ ಎಂದು ಗ್ರಾಮಸ್ಥರಿಗೆ ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಪಿಡಬ್ಲ್ಯೂಡಿ ಇಇ ಹನುಮಂತ ರಾವ್, ಎಇಇ ಸಂಪತ್ ಕುಮಾರ್, ಜಿ.ಪಂ ಎಇಇ ಮಂಜುನಾಥ್, ಬಿಇಓ ಹನುಮಂತರಾಯಪ್ಪ, ವಲಯ ಅರಣ್ಯಾಧಿಕಾರಿ ಸುರೇಶ್, ತಾ.ಪಂ ಇಓ ಬಿಕೆ ಉತ್ತಮ್, ಸಹಾಯಕ ನಿರ್ದೇಶಕ ಧನಂಜಯ್, ಜಿ.ಪಂ ಮಾಜಿ ಸದಸ್ಯ ಚೌಡಪ್ಪ, ಚಿನ್ನಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲಯ್ಯ,ಪುರಸಭೆ ಮಾಜಿ ಅಧ್ಯಕ್ಷ ಎಂ ಕೆ ನಂಜುಂಡಯ್ಯ, ಮುಖಂಡರಾದ ಕುರುಬರಹಳ್ಳಿ ಹರ್ಷ ಇತರರಿದ್ದರು.

# ವಿಜೃಂಭಣೆಯಿಂದ ನಡೆದ ಕೊಲ್ಲಾಪುರದಮ್ಮ ಜಾತ್ರೆ



ತುಮಕೂರು: ನಗರದ ಹನುಮಂತಪುರದ ಶ್ರೀ ಪೇಟೆ ಕೊಲ್ಲಾಪುರದಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಅಮ್ಮನವರ ಮೆರವಣಿಗೆ ಮತ್ತು ವಿವಿಧ ಬಗೆಯ ಆರತಿಗಳ ಸಮೇತ ದೇವರನ್ನು ಹೊತ್ತವರು ಮಂಗಳವಾರ ರಾತ್ರಿ ಅಗ್ನಿಕೊಂಡ ಪ್ರವೇಶಿಸುವ ಮೂಲಕ ದೈವ ಭಕ್ತಿ ಮೆರೆದರು. ವಿವಿಧೆಡೆಯಿಂದ ಬಂದ ಮಹಿಳೆಯರು ಬಗೆ ಬಗೆಯ ಆರತಿಗಳನ್ನು ಹೊತ್ತು ಮೆರವಣಿಗೆಯುದ್ದಕ್ಕೂ ಸಾಗಿದರು. ನಗರದ ನಾಗರಿಕರು ಈ ದೃಶ್ಯವನ್ನು ಕಣ್ತುಂಬಿಕೊಂಡರು. ಅಮ್ಮನವರಿಗೆ ಏರ್ಪಡಿಸಿದ್ದ ದೀಪಾಲಂಕಾರ ವಿಶೇಷ ರಂಗು ಪಡೆದಿತ್ತು. ಮೂರು ದಿನಗಳ ಕಾಲ ನಡೆದ ಈ ಜಾತ್ರಾ ಮಹೋತ್ಸವದಲ್ಲಿ ವಿವಿಧ ರಾಜಕೀಯ ಮುಖಂಡರು ಆಗಮಿಸಿ ದೇವಿಯ ದರ್ಶನ ಪಡೆದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಮದ್ಯಪ್ರಿಯರಿಗೆ ಬಿಗ್ ಶಾಕ್: ಆರೋಗ್ಯದ ಹಿತದೃಷ್ಟಿಯಿಂದ ಪ್ರಮುಖ ಬ್ರ್ಯಾಂಡ್‌ಗಳು ಬ್ಯಾನ್




ಭಾರತೀಯ ಆಹಾರ ಸುರಕ್ಷತಾ ಪ್ರಾಧಿಕಾರ ಓಲ್ಡ್ ಮಾಂಕ್ ಸೇರಿ ಜನಪ್ರಿಯ ಮದ್ಯ ಬ್ರ್ಯಾಂಡ್‌ಗಳಲ್ಲಿ ಕೃತಕ ಫ್ಲೇವರ್ ಮತ್ತು ಬಣ್ಣಗಳನ್ನು ಪತ್ತೆ ಹಚ್ಚಿದೆ. 'ಏಜ್ಡ್' ಮದ್ಯ ಎಂದು ತಪ್ಪು ಮಾಹಿತಿ ನೀಡಿ ಗ್ರಾಹಕರನ್ನು ವಂಚಿಸುತ್ತಿರುವುದು ಪ್ರಯೋಗಾಲಯ ತಪಾಸಣೆಯಲ್ಲಿ ದೃಢಪಟ್ಟಿದೆ. ಈ ಬ್ರ್ಯಾಂಡ್‌ಗಳನ್ನು ನಿರ್ಬಂಧಿಸಿದ್ದು, ಮದ್ಯ ತಯಾರಿಕಾ ಕಂಪನಿಗಳ ವಿರುದ್ಧ ಕಠಿಣ ನಿಯಮ ಜಾರಿಗೆ ಮುಂದಾಗಿದೆ. ಗ್ರಾಹಕರ ಆರೋಗ್ಯದ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಓಲ್ಡ್ ಮಾಂಕ್ ರಮ್ ಹಾಗೂ ಹಲವು ಪ್ರಸಿದ್ಧ ವಿಸ್ಕಿ ಬ್ರ್ಯಾಂಡ್‌ಗಳ ಪ್ರಿಯರಿಗೆ ಭಾರತೀಯ ಆಹಾರ ಭದ್ರತೆ ಮತ್ತು ಗುಣಮಟ್ಟ ಪ್ರಾಧಿಕಾರ ಭಾರಿ ಆಘಾತ ನೀಡಿದೆ. ಜನಪ್ರಿಯ ಮದ್ಯದ ಬ್ರ್ಯಾಂಡ್‌ಗಳಲ್ಲಿ ಕೃತಕ ಫ್ಲೇವರ್ ಹಾಗೂ ಬಣ್ಣಗಳನ್ನು ಬೆರೆಸಿ ಗ್ರಾಹಕರಿಗೆ ದಾರಿತಪ್ಪಿಸುವ ಮಾಹಿತಿ ನೀಡಿ ಮೋಸ ಮಾಡುತ್ತಿರುವುದು ಎಫ್‌ಎಸ್‌ಎಸ್‌ಎಐ ನಡೆಸಿದ ಪ್ರಯೋಗಾಲಯ ತಪಾಸಣೆಯಲ್ಲಿ ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ನಿಯಮ ಉಲ್ಲಂಘಿಸಿರುವ ಪ್ರಮುಖ ಬ್ರ್ಯಾಂಡ್‌ಗಳನ್ನು ನಿರ್ಬಂಧಿಸಲು ಸೂಚಿಸಲಾಗಿದೆ. ಭಾರತದ ಅತ್ಯಂತ ಹಳೆಯ ರಮ್ ಬ್ರ್ಯಾಂಡ್ ಆದ ಓಲ್ಡ್ ಮಾಂಕ್, ಹಾಗೂ ಪ್ರಸಿದ್ಧ ವಿಸ್ಕಿ ಬ್ರ್ಯಾಂಡ್‌ಗಳಾದ ರಾಯಲ್ ಚಾಲೆಂಜ್ ಮತ್ತು ಬ್ಲ್ಯಾಗ್‌ಪೈಪರ್ ಡಿಲಕ್ಸ್ ಸೇರಿದಂತೆ ಹಲವು ಪ್ರಸಿದ್ಧ ಮದ್ಯಗಳಲ್ಲಿ ಕೃತಕ ಫ್ಲೇವರ್ ಬೆರೆಸಿರುವುದು ಸಾಬೀತಾಗಿದೆ.

ಸಾಮಾನ್ಯವಾಗಿ ರಮ್ ಮತ್ತು ವಿಸ್ಕಿಯನ್ನು ಬೆಲ್ಲದ ರಸ, ಮಾಲ್ಟ್ ಅಥವಾ ದ್ರಾಕ್ಷಿ ಬಳಸಿ ನೈಸರ್ಗಿಕವಾಗಿ ಫರ್ಮಂಟೇಶನ್ ಹಾಗೂ ಮ್ಯಾಚ್ಯುರೇಶನ್ ಮಾಡಿ ಸುವಾಸನೆ ತರಲಾಗುತ್ತದೆ. ಆದರೆ ಈ ಕಂಪನಿಗಳು ನ್ಯೂಟ್ರಲ್ ಆಲ್ಕೋಹಾಲ್‌ಗೆ ಕೃತಕ ರಮ್ ಹಾಗೂ ವಿಸ್ಕಿ ಫ್ಲೇವರ್‌ಗಳನ್ನು ಬೆರೆಸಿ ಮಾರಾಟ ಮಾಡುತ್ತಿದ್ದವು. 7 ವರ್ಷ ಹಾಗೂ 12 ವರ್ಷ ಹಳೆಯ 'ಏಜ್ಡ್ ಮದ್ಯ' ಎಂದು ಲೇಬಲ್ ಹಾಕಿ ಮಾರಾಟ ಮಾಡುತ್ತಿದ್ದ ಮದ್ಯಗಳು, ಪ್ರಯೋಗಾಲಯ ತಪಾಸಣೆಯಲ್ಲಿ ಕನಿಷ್ಠ 1 ವರ್ಷವೂ ಬ್ಲೆಂಡ್ ಆಗಿಲ್ಲ ಎಂಬ ಭೀಕರ ಸತ್ಯ ಬಯಲಾಗಿದೆ.

ಗ್ರಾಹಕರ ಆರೋಗ್ಯದ ಜೊತೆ ಚೆಲ್ಲಾಟವಾಡಿ, ದಾರಿತಪ್ಪಿಸುವ ಜಾಹೀರಾತು ಹಾಗೂ ಲೇಬಲ್ ನೀಡುತ್ತಿದ್ದ ಈ ಬ್ರ್ಯಾಂಡ್‌ಗಳನ್ನು ನಿರ್ಬಂಧಿಸಿದ್ದು, ಕೇಂದ್ರ ಆಹಾರ ಇಲಾಖೆ ಮದ್ಯ ತಯಾರಿಕಾ ಕಂಪನಿಗಳ ವಿರುದ್ಧ ಕಠಿಣ ನಿಯಮ ಜಾರಿಗೆ ಮುಂದಾಗಿದೆ.









ತುಮಕೂರು ನಗರದ ಎಸ್.ಎಸ್ ಸರ್ಕಲ್‌ನಲ್ಲಿ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮನ್ನು ಹೋಂಡಾ ಶೋ ರೂಂ, ರಸ್ತೆ ಸಾರಿಗೆ ಇಲಾಖೆ, ಮತ್ತು ಸಂಚಾರಿ ಪೊಲೀಸ್ ಇಲಾಖೆಯ ವತಿಯಿಂದ ಆಯೋಜಿಸಲಾಗಿತ್ತು, ಈ ಕಾರ್ಯಕ್ರಮದಲ್ಲಿ ಸೀನಿಯರ್ ಮೋಟಾರ್ ವಾಹನ ನಿರೀಕ್ಷಕರು ಸದ್ಮಲ್ಲಾ ಶರೀಫ್, ಸಂಚಾರಿ ಪೊಲೀಸ್ ಇಲಾಖೆಯ ಎಎಸ್‌ಐ ರಘು ಮತ್ತು ಹೋಂಡಾ ಶೋರೂಮ್‌ನ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಉಪಸ್ಥರಿದ್ದರು.

